380 (511) ಶ್ರೀ ಕೃಷ್ಣ ಬೈರೇಗೌಡ ಸಿ ಬಿ (ವೇಮಗಲ್) . ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊರ ಪೊಲಿಸ್ ರಾಣೆಗಳನ್ನು ಪೊಲೀಸ್ ರಾಣೆ ದರ್ಜೆಗೇರಿಸಲಾಗಿದೆ,

ಆ) ನರಸಾಪುರ ಹೊರರಾಣೆಯನ್ನು ಪೊಲೀಸ್ ರಾಣೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ಸದರಿ ಪ್ರಸ್ತಾವನೆ ಎಂದು ಬಂದಿರುತ್ತದೆ ಯಾವಾಗ ಮೇಲ್ದರ್ಜೆಗೇರಿಸಲಾಗುವುದು,

ಈ) ಸುಮಾರು ವರ್ಷಗಳಿಂದ ಈ ಪ್ರಸ್ತಾವನೆ ಬಂದಿದ್ದರೂ ಸಹ ಮೇಲ್ದರ್ಜೆಗೇರಿಸದಿರಲು ಕಾರಣಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇಲ್ಲ

ಆ) ಬಂದಿರುತ್ತದೆ

ಇ) ನವೆಂಬರ್ 2006ರಲ್ಲಿ ಪೂರ್ಣ ಮಾಹಿತಿ ಬಂದಿದ್ದು, ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ

ಈ) ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲಿನೆಯಲ್ಲಿದೆ

381 (513) ಶ್ರೀ ಕೃಷ್ಣ ಬೈರೇಗೌಡ ಸಿ ಬಿ (ವೇಮಗಲ್) · ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿರತಕ್ಕಂತಹ ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳ ಪ್ರೇಕ್ಷಣೀಯ ಸಾಮರ್ಥ್ಯ (Tourism Potential) ಗುರುತಿಸಲಾಗಿದೆಯೇ,

ಆ) ಈ ಜಿಲ್ಲೆಯ ಪ್ರವಾಸಿ ತಾಣಗಳನ್ನು ಪ್ರೇಕ್ಷಣಿಯ ಗುಂಮಗಳನ್ನಾಗಿ (Tourism Potential) ರೂಪಿಸಿ ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಇನ್ನೂ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುವ ಪ್ರಯತ್ನವನ್ನು ಏಕೆ ಮಾಡುತ್ತಿಲ್ಲ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಸಚಿವರು)

ಅ) ಹೌದು

ಆ) 1) ಕೋಲಾರ ಜಿಲ್ಲೆಯ ಪ್ರವಾಸಿ ತಾಣಗಳನ್ನು ಪ್ರೇಕ್ಷಣೀಯ ಗುಂಪುಗಳನ್ನಾಗಿ ವಿಂಗಡಿಸಲು ಪ್ರಯತ್ನಿಸಲಾಗುವುದು ಸಧ್ಯದಲ್ಲಿ ನಂದಿ ಬೆಟ್ಟ ಹಾಗೂ ಮುದ್ದೇನಹಳ್ಳಿಗಳನ್ನು ಒಂದು ಸರ್ಕ್ಯೂಟ್ ಮಾಡಿ ಪ್ಯಾಕೇಜ್ ಟೂರುಗಳನ್ನು ನಡೆಸಲಾಗುತ್ತಿದೆ

2) ಇತರೆಡೆಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಪ್ರಯತ್ನ ಪ್ರಗತಿಯಲ್ಲಿದೆ

(ಅ) ಮುಳಬಾಗಿಲಿನ ಹೋಟೆಲ್ ಮಯೂರ ಅಪೂರ್ವವನ್ನು ಉತ್ತಮ ದರ್ಜೆಗೇರಿಸಿ ಪ್ರವಾಸಿಗರಿಗೆ ತೆರೆಯಲು ಖಾಸಗೀಕರಣ ಗೊಳಿಸಲಾಗಿದೆ

(ಆ) ಮುರಗಮಲ್ಲದರ್ಗಾದ ಬಳಿ ಯಾತ್ರಿ ನಿವಾಸವನ್ನು ನಿರ್ಮಿಸಲಾಗಿದೆ

(ಇ) ಬಾಗೇಪಲ್ಲಿ ತಾಲ್ಲೂಕು ಅಲಕಾಪುರದಲ್ಲಿ ಡಾರ್ಮೆಟರಿ ವಸತಿ ಗೃಹಗಳು ಹಾಗೂ ಶೌಚಾಲಯವನ್ನು ನಿರ್ಮಿಸಲು ಕ್ರಮ ಕೈಗೊಳ್ಳಾಲಾಗಿದೆ

(ಈ) ಉತ್ತಮ ಮಾದರಿಯ ಶೌಚಾಲಯಗಳನ್ನು ಆವಣಿ, ಕೈವಾರ ನರಸಿಂಹ ತೀರ್ಥ ಮುಳಬಾಗಿಲು ಇತ್ಯಾದಿ ಕಡೆಗಳಲ್ಲಿ ನಿರ್ಮಿಸಲಾಗುತ್ತಿದೆ

ಅಲ್ಲದೆ ಕೋಲಾರ ಜಿಲ್ಲೆಯ ಪ್ರವಾಸಿ ಸ್ಥಳಗಳ ಬಗ್ಗೆ ಮಾಹಿತಿ ಮಡಿಕೆಗಳನ್ನು ಹೊರ ತರಲಾಗಿದ್ದು, ಇದನ್ನು ಉಚಿತವಾಗಿ ಪ್ರವಾಸಿಗರಿಗೆ ನೀಡಲಾಗುತ್ತಿದೆ ಹಾಗೂ ಕೋಲಾರದಲ್ಲಿ ಪ್ರವಾಸಿ ಕಛೇರಿಯನ್ನು ತೆರೆಯಲಾಗಿದೆ, ತನ್ಮೂಲಕ ಇಲಾಖೆಯು ಕೋಲಾರ ಜಿಲ್ಲೆಗೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಪ್ರಯತ್ನಸುತ್ತಿದೆ

382 (331) ಶ್ರೀ ಕುಮಾರ್ ಬಂಗಾರಪ್ಪ ಎಸ್ (ಸೊರಬ) . ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನ ಜಡೆ ಗ್ರಾಮದಲ್ಲಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) ಸೊರಬ ತಾಲ್ಲೂಕಿನ ಜಡೆ ಗ್ರಾಮದಲ್ಲಿ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ